ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	269
ಮಾನ್ಯ ಸದಸ್ಯರ ಹೆಸರು	:	ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	22-09-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಮಂಡ್ಯ ನಗರ ಸಭೆ ವ್ಯಾಪ್ತಿಯಲ್ಲಿ ಅಗತ್ಯ ಮೂಲ ಸೌಲಭ್ಯ ಕಲ್ಪಿಸುವ ಯು.ಜಿ.ಡಿ. ಘನತ್ಯಾಜ್ಯ ಸಂಸ್ಕರಣಾ ಘಟಕ, ಕುಡಿಯುವ ನೀರು ಸೌಲಭ್ಯ ನೀಡಲು ಹೊಸದಾಗಿ ಯೋಜನೆ ತಯಾರಿಸುವ ಯೋಜನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ; (ಯೋಜನವಾರು ಮಾಹಿತಿ ನೀಡುವುದು)</td><td><u>ಒಳ ಚರಂಡಿ ವ್ಯವಸ್ಥೆ (ಯು.ಜಿ.ಡಿ):</u>
ಮಂಡ್ಯ ನಗರ ಒಳಚರಂಡಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಯೋಜನೆಯ ಅಂದಾಜನ್ನು ರೂ.61.50 ಕೋಟಿಗಳಿಗೆ ತಯಾರಿಸಿ ಮಂಡಳಿ ಪತ್ರ ಸಂಖ್ಯೆ:2507/2018-19 ದಿ:01-03-2019ರಲ್ಲಿ ಸರ್ಕಾರಕ್ಕೆ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಿದ್ದು, ಪರಿಶೀಲನೆಯ ಹಂತದಲ್ಲಿರುತ್ತದೆ. ಸದರಿ ಯೋಜನೆಯಡಿ ಕೆಳಕಂಡ ಕಾಮಗಾರಿಗಳನ್ನು ಅನುವು ಮಾಡಲಾಗಿದೆ:
• ಹಾಲಿಯಿರುವ 9.62 ಎಂಎಲ್‌ಡಿ ಹಾಗೂ 6.90 ಎಂಎಲ್‌ಡಿ ಮಲಿನ ಶುದ್ಧೀಕರಣ ಘಟಕಗಳನ್ನು ಇಸವಿ 2050ಕ್ಕೆ 12.5 ಹಾಗೂ 11.5ಎಂಎಲ್‌ಡಿಗೆ ನವೀಕರಣಗೊಳಿಸಿ ನಿರ್ಮಿಸುವುದು.
• ಬಿಟ್ಟು ಹೋದ ಪ್ರದೇಶಗಳಲ್ಲಿ 5 ಕಿಮೀ ಕೊಳವೆ ಮಾರ್ಗಗಳನ್ನು ಅಳವಡಿಸುವುದು.
• 10 ಕಿಮೀ ಹೌಸ್‌ಹೋಲ್ಡ್ ಕೊಳವೆ ಮಾರ್ಗಗಳನ್ನು ಅಳವಡಿಸುವುದು

<u>ಘನತ್ಯಾಜ್ಯ ನಿರ್ವಹಣೆ</u>
ಸ್ವಚ್ಛ ಭಾರತ ಮಿಷನ್ ಅಡಿ ಮಂಡ್ಯ ನಗರಸಭೆಗೆ ಘನತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ ರೂ. 869 ಲಕ್ಷಗಳ ಬಂಡವಾಳಮೊತ್ತದ ಯೋಜನಾ ವರದಿ ತಯಾರಿಸಿ ಉನ್ನತಾಧಿಕಾರಯುಕ್ತ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ.
• ರೂ. 635.31 ಲಕ್ಷಗಳು ಸಿವಿಲ್ ಕಾಮಗಾರಿಗಳಾಗಿರುತ್ತವೆ
• ತ್ಯಾಜ್ಯ ನಿರ್ವಹಣಾ ವಾಹನ ಮತ್ತು ಯಂತ್ರೋಪಕರಣಗಳ ಖರೀದಿಗಾಗಿ ರೂ. 233.69 ಲಕ್ಷಗಳು ಯೋಜಿಸಲಾಗಿರುತ್ತದೆ.

<u>ಕುಡಿಯುವ ನೀರು ಸರಬರಾಜು</u>
ಮಂಡ್ಯ ನಗರದ 23 ವಲಯಗಳಲ್ಲಿ ನೀರು ಸರಬರಾಜು ವಿತರಣಾ ಜಾಲವನ್ನು ಅಳವಡಿಸಿ, ಗೃಹ ಸಂಪರ್ಕಗಳನ್ನು ಕಲ್ಪಿಸುವ ಯೋಜನೆಯ ಅಂದಾಜನ್ನು ರೂ. 35.00 ಕೋಟಿಗಳಿಗೆ ತಯಾರಿಸಿ ಕ.ನ.ನೀ.ಸ ಮತ್ತು ಒ.ಚ.ಮಂಡಳಿ ಪತ್ರ ಸಂಖ್ಯೆ:2506 /2018-19 ದಿ:01-03-2019ರಲ್ಲಿ ಸರ್ಕಾರಕ್ಕೆ ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಿದ್ದು, ಪರಿಶೀಲನೆಯ ಹಂತದಲ್ಲಿರುತ್ತದೆ.

ಸದರಿ ಯೋಜನೆಯಡಿ ಕೆಳಕಂಡ ಕಾಮಗಾರಿಗಳಿಗೆ ಅನುವು ಮಾಡಲಾಗಿದೆ:</td></tr>
</table>

- ಮಂಡ್ಯ ನಗರದ ಉಳಿದ 23 ವಾರ್ಡ್‌ಗಳಲ್ಲಿ ವಿವಿಧ ವ್ಯಾಸದ ಹೆಚ್.ಡಿ.ಪಿ.ಇ ವಿತರಣಾ ಜಾಲ ಅಳವಡಿಸುವುದು -250 ಕಿ.ಮೀ.
- ಗೃಹ ಸಂಪರ್ಕಗಳನ್ನು ಕಲ್ಪಿಸುವುದು -4150 ಸಂಖ್ಯೆ.
- ಎಸ್.ಎಫ್.ಸಿ ಕುಡಿಯುವ ನೀರು: ಶಾಶ್ವತವಾದ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ಕೊಳವೆ ಬಾವಿಗಳನ್ನು ಕೊರೆಸುವುದು / ಆಳಗೊಳಿಸುವುದು / ಪಂಪ್ ಮೋಟಾರ್ ಅಳವಡಿಸುವುದು. ಹೈಡ್ರೋಫ್ರ್ಯಾಕ್ಚರಿಂಗ್ ಹಾಗೂ ನೀರು ಸರಬರಾಜು ಪೈಪುಗಳ ದುರಸ್ಥಿ / ಬದಲಾವಣೆ ಕಾಮಗಾರಿಗಳಿಗಾಗಿ ಎಸ್.ಎಫ್.ಸಿ ಕುಡಿಯುವ ನೀರು ಯೋಜನೆಯನ್ನು ರೂಪಿಸಲಾಗಿದೆ.

3. ಪ್ರಗತಿ ಯೋಜನೆಗಳಿಗೆ ಮಂಜೂರಾದ ಮೊತ್ತ ಎಷ್ಟು: ಈ ವರೆಗೆ ಖರ್ಚಾದ ಮೊತ್ತ ಎಷ್ಟು (ಯೋಜನೆವಾರು ಪ್ರಗತಿಯ ವಿವರ ನೀಡುವುದು)

ಒಳ ಚರಂಡಿ ಮತ್ತು ನೀರು ಸರಬರಾಜು:
ಮೇಲೆ ತಿಳಿಸಿರುವಂತೆ, ಒಳಚರಂಡಿ ಮತ್ತು ಕುಡಿಯುವ ನೀರು ಸರಬರಾಜು ಯೋಜನೆಯ ಪ್ರಸ್ತಾವನೆಗಳನ್ನು ಆಡಳಿತಾತ್ಮಕ ಅನುಮೋದನೆಗೆ ಸರ್ಕಾರಕ್ಕೆ ಸಲ್ಲಿಸಿದ್ದು, ಪರಿಶೀಲನೆಯ ಹಂತದಲ್ಲಿರುತ್ತದೆ.

ಘನತ್ಯಾಜ್ಯ ನಿರ್ವಹಣೆ.
ಮಂಡ್ಯ ನಗರಸಭೆಯು ಘನತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ ವಿಸ್ತೃತವಾದ ಯೋಜನಾ ವರದಿ [illegible] ಈ ಕೆಳಕಂಡಂತೆ ಅನುದಾನವು ಬಿಡುಗಡೆಯಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

ಕ್ರ.ಸಂ	ನಗರ ಸ್ಥಳೀಯ ಸಂಸ್ಥೆಯ ಹೆಸರು	ಸಿವಿಲ್ ಕಾಮಗಾರಿಗೆ ಮಂಜೂರಾದ ಅನುದಾನ	ಸಿವಿಲ್ ಕಾಮಗಾರಿಗೆ ಬಿಡುಗಡೆಗೊಂಡಿರುವ ಅನುದಾನದ ವಿವರ	ಸಿವಿಲ್ ಕಾಮಗಾರಿ ಬಳಕೆಯಾಗಿರುವ ಅನುದಾನದ ವಿವರ	ವಾಹನ & ಯಂತ್ರೋಪಕರಣಗಳಿಗೆ ಮಂಜೂರಾದ ಅನುದಾನ	ವಾಹನ & ಯಂತ್ರೋಪಕರಣಗಳಿಗೆ ಬಿಡುಗಡೆಯಾದ ಅನುದಾನದ ವಿವರ	ವಾಹನ & ಯಂತ್ರೋಪಕರಣಗಳ ಬಳಕೆಯಾಗಿರುವ ಅನುದಾನದ ವಿವರ	ಒಟ್ಟು ಬಳಕೆಯಾಗಿರುವ ಮೊತ್ತ (5+8)
1	2	3	4	5	6	7	8	9
1.	ನಗರಸಭೆ ಮಂಡ್ಯ	ರೂ.[illegible]	ರೂ.55.74	ರೂ.55.74	ರೂ.230.69	ರೂ.70.07	ರೂ.70.07	125.81

ಎಸ್.ಎಫ್.ಸಿ ಕುಡಿಯುವ ನೀರು ಯೋಜನೆ:-

(ರೂ. ಲಕ್ಷಗಳಲ್ಲಿ)

ನಗರ ಸ್ಥಳೀಯ ಸಂಸ್ಥೆಯ ಹೆಸರು	ವರ್ಷ	ಅನುದಾನದ ಹಂಚಿಕೆ	ಅನುದಾನದ ಬಿಡುಗಡೆ	ಖರ್ಚು
ನಗರಸಭೆ ಮಂಡ್ಯ	2019-20	20	20	20
	2020-21	2.5	[illegible]	0

4. ನಗರಸಭೆ ವ್ಯಾಪ್ತಿಯಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಮೂಲ ಸೌಕರ್ಯ ನೀಡುವಲ್ಲಿ ಸರ್ಕಾರದ ಮುಂದಿನ ನಿರ್ಧಾರವೇನು?

ಘನತ್ಯಾಜ್ಯ ನಿರ್ವಹಣೆ:
ನಗರಸಭೆ ವ್ಯಾಪ್ತಿಯಲ್ಲಿನ ಜನಸಂಖ್ಯೆ ಅನುಗುಣವಾಗಿ ಅಗತ್ಯವಿರುವ ಪೌರಕಾರ್ಮಿಕರನ್ನು ಈಗಾಗಲೇ ನೇಮಿಸಲಾಗಿರುತ್ತದೆ ಹಾಗೂ ನಗರ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯದ ಪ್ರಮಾಣದ ಅನುಸಾರ ತ್ಯಾಜ್ಯ ನಿರ್ವಹಣೆಗೆ ಅಗತ್ಯವಿರುವ ಮೂಲ ಸೌಕರ್ಯಗಳಾದ ವಾಹನ

ಯಂತ್ರೋಪಕರಣಗಳು, ಎಂಟ್ರೀ ಪ್ಲಾಟ್‌ಫಾರಂ, ಶೆಡ್, ಸ್ಯಾನಿಟರಿ ನೆಲಭರ್ತಿ ಇತ್ಯಾದಿಗಳನ್ನು ಕಲ್ಪಿಸಲು ಈಗಾಗಲೇ ನಗರಸಭೆಯು ಸಿದ್ಧಪಡಿಸಿರುವ ಯೋಜನಾ ವರದಿಗೆ ಉನ್ನತಾಧಿಕಾರಿಯುಕ್ತ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಮೂಲ ಸೌಕರ್ಯಗಳು:

ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಮೂಲ ಸೌಕರ್ಯಗಳಾದ ನೀರು ಸರಬರಾಜು, ಒಳಚರಂಡಿ, ರಸ್ತೆ & ಚರಂಡಿ ಹಾಗೂ ಮಳೆನೀರು ಚರಂಡಿ ಕಾಮಗಾರಿಗಳನ್ನು ಅವಶ್ಯತೆ ಮೇರೆಗೆ ಹಂತ-ಹಂತವಾಗಿ ಅನುದಾನ ಲಭ್ಯತೆ ಅನುಗುಣವಾಗಿ ಅನುಷ್ಠಾನಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಸಂಖ್ಯೆ: ನಅಇ 262 ಸಿಎಸ್‌ಎಸ್ 2020

(ನಾರಾಯಣಗೌಡ)
ಮಾನ್ಯ ಪೌರಾಡಳಿತ ಹಾಗೂ
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.